## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 03.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಸಿ ಕೆ ವಕೀಲರಿಂದಃ**

ಅಪಘಾತವನ್ನು ನಾನು ನೋಡಿರುವುದಿಲ್ಲ. 2 ನೇ ಅರ್ಜಿದಾರರು ನನ್ನ ಗಂಡ. ಶಂಕರ ನನ್ನ ಮಗ ತೀರಿಕೊಂಡಿರುತ್ತಾನೆ. ದಿಃ18/07/2024 ರಂದು ನನ್ನ ಮಗನಿಗೆ ಅಪಘಾತವಾಗಿರುತ್ತದೆ. ಅಪಘಾತವಾದ ದಿನ ನನ್ನ ಮಗ ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದನು. ಸದರಿ ಮೋಟಾರ್ ಸೈಕಲನ್ನು ಆತನೇ ತೆಗೆದುಕೊಂಡಿದ್ದ. ಸದರಿ ದಿನದಂದು ನನ್ನ ಮಗನಿಗೆ ಮೋಟಾರ್ ಸೈಕಲ್ ಚಾಲನೆ ಮಾಡಲು ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸಾಕ್ಷಿ ಅದು ಆತನಿಗೆ ಗೊತ್ತು ಎಂದು ನುಡಿಯುತ್ತಾರೆ. ಚಾಲನಾ ಪರವಾನಿಗೆ ಇರಲಿಲ್ಲ ಎಂದು ನಾನು ಪೊಲೀಸರಿಗೂ ಸಹ ಹೇಳಿರುತ್ತೇನೆ ಎಂದರೆ ಸರಿ. ನನ್ನ ಇನ್ನೊಬ್ಬ ಮಗ ಅದೇ ದಿನ ಪೊಲೀಸರಿಗೆ ಪಿರ್ಯಾದಿ ನೀಡಿರುತ್ತಾನೆ. ಅದೇ ದಿನ ಪಿರ್ಯಾದಿ ನೀಡಿದ್ದೇವೆಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಇಲ್ಲ ಅಪಘಾತವಾದ ಮಾರನೆ ದಿನ ಪಿರ್ಯಾದಿ ನೀಡಿರುತ್ತದೆ ಎಂದು ನುಡಿಯುತ್ತಾರೆ.

2. ನನ್ನ ಇನ್ನೊಬ್ಬ ಮಗನಿಗೆ ಆತನ ಸ್ನೇಹಿತರು ಫೋನ್ ಹಚ್ಚಿ ಅಪಘಾತದ ಬಗ್ಗೆ ತಿಳಿಸಿರಬಹುದು. ಅಪಘಾತದ ಬಗ್ಗೆ ಯಾರು ತಿಳಿಸಿದರು ಹಾಗೂ ಯಾರು ಫೋನ್ ಮಾಡಿದರು ಮತ್ತು ಪಿರ್ಯಾದಿ ಏನೆಂದು ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಯಾರ ಮೇಲೆ ಕೇಸ್ ಹಾಕಿರುತ್ತಾರೆಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಟ್ರಕ್ ನವರು ಓವರ್ ಟೆಕ್ ಮಾಡಿ ಅಪಘಾತಪಡಿಸಿರುತ್ತಾರೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ಪೊಲೀಸರು ಯಾರ ಯಾರ ಮೇಲೆ ಕೇಸ್ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಮಗ ಚಾಲನಾ ಪರವಾನಿಗೆ ಪತ್ರ ಹೊಂದಿದೇ ಹಾಗೂ ಮದ್ಯಪಾನ ಸೇವನೆ ಮಾಡಿ ವಾಹನ ಚಾಲನೆ ಮಾಡುತ್ತಿದ್ದ ಎಂದು ಆತನನ್ನು ಆರೋಪಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ರೀತಿ ಅವನು ಮಾಡುತ್ತಿರಲಿಲ್ಲ ಆದರೆ ಕೇಸ್ ಹಾಕಿದ ವಿಷಯ ನಿಜ ಎಂದು ನುಡಿಯುತ್ತಾರೆ. ನನ್ನ ಮಗ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ ಹಾಗೂ ಆತನ ಹತ್ತಿರ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಹಾಗಾಗಿ ಆತನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಯಾವುದೋ

ಒಂದು ಟ್ರಕ್ ಬಂದು ನಿಂತಿತ್ತು ಹಾಗಾಗಿ ಅದರ ಮೇಲೆಯೂ ಸಹ ಸುಳ್ಳು ಪಿರ್ಯಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ಹಾಗೂ ನನ್ನ ಮಗನೇ ಅಪಘಾತ ಮಾಡಿಕೊಂಡಿದ್ದರೂ ಸಹ ನಾನು ಹಾಗೂ ಎದುರುದಾರ ನಂ.1, ಪಿರ್ಯಾದುದಾರರು ಮಿಲಾಪೆಯಾಗಿ ಎದುರುದಾರ ನಂ.2 ಇವರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಒಂದು ಸುಳ್ಳು ಪಿರ್ಯಾದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಅಪಘಾತವನ್ನು ನೋಡಿರುವಂತಹ ಯಾವುದೇ ವ್ಯಕ್ತಿ ಇಲ್ಲ ಎಂದರೆ ಸರಿ. ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ಪ್ರರಕಣ ದಾಖಲಿಸಿ ಎದುರುದಾರ ನಂ.2 ಇವರ ಕಡೆಯಿಂದ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಿಮ್ಮ ಮಗ HDMC ಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿ ಪ್ರತಿತಿಂಗಳು 25 ಸಾವಿರ ಗಳಿಸುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ನೀಡಿಲ್ಲ ಎಂದರೆ ಸಾಕ್ಷಿ ಅದು ಅವರಿಗೆ ಗೊತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ನನ್ನ ಕೈಗೆ ಹಣ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಮಗ ಜೀವಂತವಿದ್ದಾಗ 25 ಸಾವಿರ ರೂ.ಗಳನ್ನು ಗಳಿಸುತ್ತಿರಲಿಲ್ಲ ಹಾಗೂ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 54 ವರ್ಷ ವಯಸ್ಸಾಗಿರಬಹುದು. ನನಗೆ 44 ವರ್ಷ ವಯಸ್ಸು. ನನ್ನ ಗಂಡ ಮನೆಯಲ್ಲಿಯೇ ಇರುತ್ತಾರೆ. ನನ್ನ ಗಂಡ ಹಾಗೂ ನನ್ನ ಇನ್ನೊಬ್ಬ ಮಗ ಕೆಲಸಕ್ಕೆ ಹೋಗುತ್ತಿದ್ದರೂ ಇಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ಮೃತ ಮಗ ನಮ್ಮ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದ ಹಾಗೂ ನಮಗೆ ವಯಸ್ಸಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮಗನ ವಿರುದ್ಧ ಸಹ ದೋಷಾರೋಪಣೆಪಟ್ಟಿ ಸಲ್ಲಿಸಿದ ಕಾರಣ ಆತನು ಸಹ ಅಪಘಾತಕ್ಕೆ

ಕಾರಣೀಭೂತನಾಗಿರುತ್ತಾನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**